ನೋಡಿಕೊಳ್ಳಬೇಕಾಗಿರುವುದರಿಂದ ಅವರು ಪ್ರತಿದಿನ ತಮ್ಮ ಕಛೇರಿಯಲ್ಲಿ ಇರುವುದು ಅಸಾಧ್ಯ. ಅದೂ ಅಲ್ಲದೆ ತಮ್ಮ ಪ್ರತಿ ತಿಂಗಳ ಪ್ರವಾಸಕಾರ್ಯಕ್ರಮವನ್ನು ತಿಂಗಳ ಮೊದಲ ವಾರದಲ್ಲಿಯೇ ಮಾಡಿಕೊಂಡಿದ್ದು, ಅದರಂತೆ ದಿನಾಂಕ ೯-೫-೮೮ರಂದು ಉಪ್ಪೂರು ಗ್ರಾಮದ ಪ್ರವಾಸ ಕಾರ್ಯಕ್ರಮವನ್ನು ನಮೂದಿಸಿ ಅದರಂತೆ ಪ್ರವಾಸ ಕೈಗೊಂಡಿರುತ್ತಾರೆ. ದಿನಾಂಕ ೧೦-೫-೮೮ ರಿಂದ ೧೩-೫-೮೮ರವರೆಗೆ ಬ್ರಹ್ಮಾವರದ ಫಿರ್ಕಾ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ್ದು ಗ್ರಾಮ ಕರಣಿಕರ ಸಭೆಯಲ್ಲಿ ಸಹ ಭಾಗವಹಿಸಿ ದಿನಾಂಕ ೧೩-೫-೮೮ರ ಅಪರಾಹ್ನ ಕಛೇರಿಯಲ್ಲಿಯೇ ಇದ್ದುದ್ದು ತಿಳಿದು ಬಂದಿದೆ.

ಚಾಂತಾರು, ಮಂಡಪಾಡಿ ಗ್ರಾಮಕರಣಿಕರು ದಿನಾಂಕ ೯-೫-೮೮ರ ಮತ್ತು ೧೦-೫-೮೮ರಂದು 'ಸಾಂದರ್ಭಿಕ ರಜೆ' ಮೇಲಿದ್ದುದರಿಂದ ಕಚೇರಿಗೆ ಹಾಜರಾಗಲಿಲ್ಲ. ದಿನಾಂಕ ೧೧-೫-೮೮ರ ಮತ್ತು ೧೨-೫-೮೮ರರಂದು ಹೆಚ್ಚಿನ ಪ್ರಭಾರದಲ್ಲಿದ್ದ ಕೋಟಾ ಫಿರ್ಕಾದ ಕಾರ್ಕಡ ಗ್ರಾಮಕರಣಿಕರ ವಲಯದಲ್ಲಿ ಕಾರ್ಯನಿರತರಾಗಿದ್ದುದರಿಂದ ಮೇಲ್ಕಾಣಿಸಿದ ಇಬ್ಬರೂ ಅಧಿಕಾರಿಗಳು ದಿನಾಂಕ ೯-೫-೮೮ರರಂದು ಕಚೇರಿಗೆ ಹಾಜರಾಗದೇ ಇದ್ದುದು ಸಹಜವೂ, ಸಮರ್ಪಕವೂ ಆಗಿದೆ.

ಸದರಿ ಅಧಿಕಾರಿಗಳ ಗೈರುಹಾಜರಿಯಿಂದ ಗ್ರಾಮಸ್ಥರಿಗೆ ತೊಂದರೆಯಾದ ಬಗ್ಗೆ ಉಡುಪಿ ತಾಲ್ಲೂಕು ಕಚೇರಿಗೆ ಯಾವ ದೂರೂ ಬಂದಿರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಆಗಿರಬಹುದಾದ ಅನಾನುಕೂಲಕ್ಕೆ ವಿಷಾದಿಸಲಾಗಿದೆ.

17) ರಾಜ್ಯದಲ್ಲಿರುವ ಸ್ಟೆನೋಟೈಪಿಸ್ಟರಿ ಪದವೀಧರರಿಗೆ ಗರಿಷ್ಠ ವಯೋಮಿತಿ ನಿರ್ಬಂಧವನ್ನು ತೆಗೆದು ಹಾಕುವುದು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ಸ್ಟೆನೋಟೈಪಿಸ್ಟರ ಪದವೀಧರರಲ್ಲಿ ಈಗಾಗಲೇ ಬಹು ಮಂದಿ ಸರ್ಕಾರವು ನೀಡಿರುವ ಗರಿಷ್ಠ ವಯೋಮಿತಿ (೧೮ ವರ್ಷಗಳು) ರಿಯಾಯಿತಿಯನ್ನು ಮೀರಿರುತ್ತಾರೆ. ಮತ್ತು ಮೀರಿರುತ್ತಲೂ ಇದ್ದಾರೆ. ಈ ಹಿಂದೆ ಸ್ಟೆನೋಟೈಪಿಸ್ಟರ ಪದವೀಧರ ಸಂಘವು ವಯೋಮಿತಿಯ ನಿರ್ಬಂಧವನ್ನು ತೆಗೆದುಹಾಕಿ ಸಂಪೂರ್ಣ ರಿಯಾಯಿತಿ ನೀಡಬೇಕೆಂದು ವಿನಂತಿಸಿಕೊಂಡಿತ್ತು. ಸರ್ಕಾರ ಯಾವುದೇ ನಿರ್ಧಾರ ಕೈಗೊಳ್ಳದ ಪರಿಣಾಮ ನೇಮಕಾತಿ ಮಾಡುವಾಗ ಅವರುಗಳಿಗೆ ಕೆಲಸಕ್ಕೆ ಸೇರಲು ಅನರ್ಹತೆಯಾಗಿ ಅವರಿಗೆ ಅನ್ಯಾಯವಾಗಿದೆ.

ಆದ್ದರಿಂದ ಸ್ಟೆನೋಟೈಪಿಸ್ಟರ ಪದವೀಧರರನ್ನು ಕೆಲಸಕ್ಕೆ ನೇಮಕ ಮಾಡುವಾಗ ಈಗ ಇರುವ ಗರಿಷ್ಠ ವಯೋಮಿತಿಯನ್ನು ತೆಗೆದುಹಾಕಿ ಸಂಪೂರ್ಣ ರಿಯಾಯಿತಿ ನೀಡಿ ಜೇಷ್ಠತಾ ಪಟ್ಟಿಯಲ್ಲಿರುವ ಎಲ್ಲಾ ಸ್ಟೆನೋಟೈಪಿಸ್ಟರ ಪದವೀಧರರಿಗೂ ಕೆಲಸ ದೊರೆಯುವಂತೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಖಾತೆ ಸಚಿವರು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಸ್ಟೆನೋಟೈಪಿಸ್ಟರ ಪದವೀಧರರ ಯೋಜನೆಯು ಡಿಸೆಂಬರ್ ೧೯೭೭ರಲ್ಲಿ ಪ್ರಾರಂಭಿಸಲ್ಪಟ್ಟಿತ್ತು. ಅಲ್ಲಿಂದೀಚೆಗೆ ಸುಮಾರು ಹದಿನಾಲ್ಕು ಸಾವಿರ ಸ್ಟೆನೋಟೈಪಿಸ್ಟರ ಪದವೀಧರರನ್ನು ನೇಮಿಸಿಕೊಳ್ಳಲಾಯಿತು. ಆದರೆ ಇದುವರೆವಿಗೆ ಸರ್ಕಾರಿ ನೌಕರಿಯಲ್ಲಿ ಸಕ್ರಮ ನೇಮಕಾತಿ ದೊರೆಯದೆ ಸುಮಾರು ೭೪೦೦ ಸ್ಟೆನೋಟೈಪಿಸ್ಟರ ಪದವೀಧರರು ಇನ್ನೂ ಉಳಿದುಕೊಂಡಿದ್ದಾರೆ.

ಸ್ಟೆನೋಟೈಪಿಸ್ಟರ ಪದವೀಧರರನ್ನು ಸರ್ಕಾರಿ ನೌಕರಿಯಲ್ಲಿ ಸಕ್ರಮ ನೇಮಕಾತಿ ಮಾಡಿಕೊಳ್ಳುವುದಕ್ಕಾಗಿ ಸರ್ಕಾರ ಆಗಾಗ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಬಂದಿದೆ.

ನೌಕರಿ ಸೇರುವುದಕ್ಕೆ ನಿಗದಿಪಡಿಸಲ್ಪಟ್ಟ ಗರಿಷ್ಟ ವಯೋಮಿತಿಯಲ್ಲಿ ಅವರಿಗೆ ಹತ್ತು ವರ್ಷಗಳ ರಿಯಾಯಿತಿ ನೀಡಿರುವುದೂ ಸಹ ಈ ಕ್ರಮಗಳಲ್ಲಿ ಒಂದಾಗಿದೆ. ಇದರಿಂದಾಗಿ ಅವರುಗಳಿಗೆ ಕೆಳಕಂಡಂತೆ ಗರಿಷ್ಟ ವಯೋಮಿತಿ ಇರುತ್ತದೆ.

ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಗ್ರೂಪ್-ಎ ಪ್ರವರ್ಗ	೪೫ ವರ್ಷ
ಇತರೆ ಹಿಂದುಳಿದ ವರ್ಗಗಳು	೪೩ ವರ್ಷ
ಇತರರು	೪೦ ವರ್ಷ

ಆದ್ದಾಗ್ಯೂ ಈ ಗರಿಷ್ಟ ಮಿತಿಯನ್ನು ದಾಟಿರುವ ಸ್ಪೈಲ್ಪೆಂಡಿಯರಿ ಪದವೀಧರರು ಇದ್ದಲ್ಲಿ ಅವರಿಗೆ ಇನ್ನೂ ಹೆಚ್ಚಿನ ರಿಯಾಯಿತಿಯನ್ನು ಕೊಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

18) ರಾಜ್ಯದಲ್ಲಿ ಸರ್ಕಾರದವರಿಂ ನಿಗದಿ ಪಡಿಸಿರುವ ಬೆಲೆಗೆ ಜೋಳವನ್ನು ಖರೀದಿಸಲು ಒತ್ತಾಯ

ಶ್ರೀ ಶ್ರೀರಂಗದೇವರಾಯಲು (ಕನಕಗಿರಿ).—ಸರಕಾರದವರು ಈ ಮೊದಲೇ ಜೋಳದ ಖರೀದಿ ಬೆಲೆಯನ್ನು ಕ್ವಿಂಟಾಲಿಗೆ ೧೯೦ ರೂಪಾಯಿಗಳಂತೆ ನಿಗದಿಪಡಿಸಿದ್ದು ೨೦ ಸಾವಿರ ಟನ್ ಜೋಳವನ್ನು ಖರೀದಿ ಮಾಡುವ ಯೋಜನೆ ಇದ್ದಿತು. ಆ ಪೈಕಿ ಯಾವಯಾವ ಜಿಲ್ಲೆಗಳಿಂದ ಎಷ್ಟು ಪ್ರಮಾಣದ ಜೋಳವನ್ನು ಖರೀದಿ ಮಾಡಲಾಯಿತು ? ಗಂಗಾವತಿ ತಾಲ್ಲೂಕಿನ ರೈತರು ಈ ಬೇಸಿಗೆ ಬೆಳೆಯಲ್ಲಿ ಹೆಚ್ಚು ಪ್ರಮಾಣದ ಜೋಳವನ್ನು ಬೆಳೆದಿದ್ದು ಸರಕಾರದ ತೀರ್ಮಾನದಂತೆ ಸರಕಾರದವರು ಈವರೆಗೆ ಜೋಳವನ್ನು ಖರೀದಿ ಮಾಡದೇ ಇರುವುದರಿಂದ ಜೋಳ ಮಾರಾಟವಾಗದೆ ದಾಸ್ತಾನು ರೈತರಲ್ಲೇ ಉಳಿದಿದೆ. ಮಾರುಕಟ್ಟೆ ದರ ಬಹಳ ಕಡಿಮೆ ಇದ್ದು ಸರಕಾರವೇ ನಿಗದಿಪಡಿಸಿದ ದರದಲ್ಲಿ ರೈತರಿಂದ ಜೋಳವನ್ನು ಕೊಂಡಲ್ಲಿ ರೈತರು ಇದಕ್ಕಾಗಿ ಸಹಕಾರ ಸಂಘಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡಲು ಅನುಕೂಲವಾಗುವುದರಿಂದ ಜೂನ್ ತಿಂಗಳ ೧೦ ರೊಳಗಾಗಿ ರೈತರು ಸಾಲ ಮರುಪಾವತಿ ಮಾಡಿದಲ್ಲಿ ಬಡ್ಡಿ ಮನ್ನಾ ಆಗುವ ಪ್ರಯುಕ್ತ ಈ ಬಗ್ಗೆ ಸರ್ಕಾರದವರು ಕೂಡಲೇ ನಿರ್ಧಾರ ಕೈಕೊಂಡು ಸದರಿ ಜೋಳವನ್ನು ಕೊಂಡು ಜೂನ್ ೧೦ ರೊಳಗಾಗಿಯೇ ರೈತರಿಗೆ ಹಣ ಪಾವತಿ ಯಾಗುವಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಆದೇಶ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ, ಸರ್ಕಾರವು ಕ್ವಿಂಟಾಲ್ ಒಂದಕ್ಕೆ ೧೯೦ ರೂಪಾಯಿಗಳಿಗೆ ವಿಸಾರದಂತೆ ೨೦೦೦೦ ಟನ್ ಜೋಳವನ್ನು ಮಂಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ಯೋಚಿಸಿದ್ದು ಈ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸಿ ಕರ್ನಾಟಕ ಆಹಾರ ಮತ್ತು ನಾಕರೀಕ ಸರಬರಾಜು ನಿಗಮ ನಿಯಮಿತಕ್ಕೆ ನಿರ್ದೇಶನ ನೀಡಲಾಗಿದೆ. ಆದರೆ ಜೋಳದ ಮಂಕ್ತ ಮಾರುಕಟ್ಟೆಯ ಬೆಲೆಯು ಸರ್ಕಾರ ನಿಗದಿ ಪಡಿಸಿರುವ ಬೆಲೆಗಿಂತ ಜಾಸ್ತಿ ಇರುವುದರಿಂದ ಜೋಳದ ದಾಸ್ತಾನಂ ಲಭ್ಯವಾಗುತ್ತಿಲ್ಲವೆಂದು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ತಿಳಿಸಿದೆ, ಆದರಂತೆ ಇಲ್ಲಿಯವರೆವಿಗೆ ಯಾವ ಜಿಲ್ಲೆಯಿಂದಲೂ ಜೋಳವನ್ನು ಖರೀದಿಸಿರುವುದಿಲ್ಲ.

ಸರ್ಕಾರವು ನಿಗದಿ ಪಡಿಸಿದ ದರದಲ್ಲಿ ಉತ್ತಮ ಗುಣಮಟ್ಟದ ಜೋಳವು ಲಭ್ಯವಾಗುವುದಾದರೆ ಮಾನ್ಯ ಸದಸ್ಯರು ಸೂಚಿಸಿರುವ ರಾಯಚೂರು ಜಿಲ್ಲೆ ಗಂಗಾವತಿಯಲ್ಲಿ ಸರ್ಕಾರವು ಈಗಾಗಲೇ ಹೊರಡಿಸಿರುವ ಆದೇಶದ ಮೇರೆಗೆ ಜೋಳವನ್ನು ಖರೀದಿಸುವಂತೆ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ನಿರ್ದೇಶನವನ್ನು ನೀಡಲಾಗುವುದು.